ಹುಬ್ಬಳ್ಳಿ ನಗರದಲ್ಲಿ ಸಾಕ್ಷರರನ್ನಾಗಿ ಮಾಡಲು ನೀಡಿದ ಅನುದಾನ.

3032:(4150)

ಶ್ರೀ ಅಶೋಕ್ ಎಸ್.ಕಾಟವೆ (ಹುಬ್ಬಳ್ಳಿ): ಮಾನ್ಯ ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ ಸಾರ್ವಜನಿಕ ಗ್ರಂಥಾಲಯಗಳು ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿ ಇಲಾಖೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಮಹಾನಗರದಲ್ಲಿರುವ ಅನಕ್ಷರಸ್ಥರ ಸಂಖ್ಯೆ ಎಷ್ಟು? (ಪುರುಷ ಹಾಗೂ ಮಹಿಳೆಯರ ಪ್ರತ್ಯೇಕ ವಿವರ ನೀಡುವುದು)

ಆ) ಇವರನ್ನು ಸಾಕ್ಷರರನ್ನಾಗಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳು ಫಲದಾಯಕವಾಗಿವೆಯೆ?

ಇ) 1997-98ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕಾಗಿ ಮಂಜೂರಾದ ಅನುದಾನವೆಷ್ಟು? ಇಲ್ಲಿಯವರೆಗೆ ಎಷ್ಟು ಅನುದಾನ ಖರ್ಚು ಮಾಡಲಾಗಿದೆ?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ವೃತ್ತಿ ಶಿಕ್ಷಣ ಸಾರ್ವಜನಿಕ ಗ್ರಂಥಾಲಯಗಳು ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿ ಇಲಾಖೆಗಳ ರಾಜ್ಯ ಸಚಿವರು):

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಈ ಹಿಂದೆ ಗುರುತಿಸಲಾದ ಅನಕ್ಷರಸ್ಥರ ಸಂಖ್ಯೆ 48171.

ವಯೋಗುಂಪು:		9-35
ಪುರುಷರು	-	20,867
ಮಹಿಳೆಯರು	-	27,304
ಒಟ್ಟು	-	48,171

ಆ) ಹೌದು.

ಇ) 1997-98ಕ್ಕೆ ಮಂಜೂರಾದ ಅನುದಾನ ರೂ.2,16,848.00 ಇಲ್ಲಿಯವರೆಗೆ ಖರ್ಚಾದ ಅನುದಾನ ರೂ. 2,03,590.00 ಮಾತ್ರ.

ತೀರ್ಥಹಳ್ಳಿ ಕೆ.ಸಿ.ಆಸ್ಪತ್ರೆಯ ವಿಶ್ವಬ್ಯಾಂಕ್ ಯೋಜನೆ ಕಾಮಗಾರಿಗಳ ಆರಂಭ

3033:(4103)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಹೆಲ್ತ್ ಪ್ರಾಜೆಕ್ಟ್‌ಗೆ ಸೇರಿರುವ ತೀರ್ಥಹಳ್ಳಿಯ ಕೆ.ಸಿ. ಆಸ್ಪತ್ರೆಯ ಅಭಿವೃದ್ಧಿ ಕಾಮಗಾರಿಗಳು ಯಾವುವು. ಇದಕ್ಕೆ ಮಂಜೂರು ಮಾಡಿರುವ ಅನುದಾನ ಎಷ್ಟು

ಆ) ಈ ಬಗ್ಗೆ ಈಗಾಗಲೇ ಮಾಡಿದ ವೆಚ್ಚ ಎಷ್ಟು?

ಇ) ಈ ಯೋಜನೆಯ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಡಾ|| ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ತೀರ್ಥಹಳ್ಳಿ ತಾಲ್ಲೂಕು ಮಟ್ಟದ ಆಸ್ಪತ್ರೆಯ ನವೀಕರಣ ಮತ್ತು ವಿಸ್ತರಣಾ ಕಾಮಗಾರಿಯು ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಸೇರಲ್ಪಟ್ಟಿದೆ. ಈ ಕಾಮಗಾರಿಗೆ ವಿವರವಾದ ನಕ್ಷೆ ಮತ್ತು ಅಂದಾಜು 181.64 ಲಕ್ಷಗಳಿಗೆ ಮಂಜೂರಾತಿ ನೀಡಿದ್ದು ಗುತ್ತಿಗೆ ಕಚೇರಿಗಳನ್ನು ವಿಶ್ವಬ್ಯಾಂಕ್ ಪೂರ್ವಭಾವಿ ಅನುಮತಿಗೆ ಸಲ್ಲಿಸಲಾಗಿದೆ. ಅನುಮೋದನೆಗೊಂಡ ನಂತರ ಗುತ್ತಿಗೆ ಕರೆದು ಕಾಮಗಾರಿ ಕೈಗೊಳ್ಳಲಾಗುವುದು.

ಆ) ಕಾಮಗಾರಿಗಳು ಇನ್ನು ಮುಂದೆ ಪ್ರಾರಂಭವಾಗಬೇಕಾಗಿದೆ.

ಇ) ಈ ಕಾಮಗಾರಿಯನ್ನು 1999ರ ಫೆಬ್ರವರಿ ಅಂದಿಯಲ್ಲಿ ಪ್ರಾರಂಭಿಸುವ ನಿರೀಕ್ಷೆ ಇದೆ.

ಶನಿವಾರ ಸಂತೆ ಮತ್ತು ಸೋಮವಾರ ಪೇಟೆ ಕುಡಿಯುವ ನೀರಿನ ಅಭಾವ

3034:(4107)

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ (ಸೋಮವಾರಪೇಟೆ) ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶನಿವಾರ ಸಂತೆಯಲ್ಲಿ ಕುಡಿಯುವ ನೀರಿನ ಅಭಾವವನ್ನು ಪರಿಹರಿಸಲು ಅದರ ನಿವಾರಣೆಗಾಗಿ ಸರ್ಕಾರ ಭರವಸೆ ನೀಡಿದ್ದು ನಿಜವೇ. ಹಾಗಿದ್ದಲ್ಲಿ ಯಾವುದೇ ಕ್ರಮ